

بسم اللهِ الرّحمٰن الرّحيم

# ಸತ್ಯವಿಶ್ವಾಸದೊಂದಿಗೆ ಸತ್ಕರ್ಮಗಳು ಅನಿವಾರ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **19-09-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: "ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸದೊಂದಿಗೆ ಸತ್ಕರ್ಮಗಳನ್ನು ಸಹ ಪ್ರಸ್ತಾಪಿಸಿರುವನು. ಸತ್ಕರ್ಮದಲ್ಲಿ ಒಂದಿಷ್ಟು ಕುಂದು ಕೊರತೆ ಇರಬಾರದು. ನೆನಪಿಡಿರಿ, ಮನುಷ್ಯನ ಕರ್ಮಗಳಲ್ಲಿ ಯಾವಾಗಲೂ ತೂತು ಬೀಳುತ್ತಾ ಇರುತ್ತದೆ. ಸತ್ಕರ್ಮಗಳಲ್ಲಿ ಉಂಟಾಗುವ ರಂಧ್ರಗಳೆಂದರೆ ತೋರಿಕೆಗೆ ಮಾಡುವ ಕೆಲಸಗಳಾಗಿವೆ. ಮನುಷ್ಯನು ಅದರಿಂದ ಸ್ವಯಂ ಆನಂದಗಳಿಸುತ್ತಾನೆ. ಅದು ಅವನ ಸ್ವಾರ್ಥದ ಸಂತೋಷವಾಗಿದೆ. ಮನುಷ್ಯನು ಮಾಡುವ ವಿವಿಧ ರೀತಿಯ ಕೆಟ್ಟ ಕೆಲಸಗಳ ಕಾರಣದಿಂದಲೂ ಅವನ ಉತ್ತಮ ಕೆಲಸಗಳು ನಿಷ್ಫಲವಾಗುತ್ತವೆ. ದೃಢ ನಿಶ್ಚಯದೊಂದಿಗೆ ಸತ್ಕರ್ಮಗಳನ್ನು ಮಾಡಬೇಕು. ದೃಢವಾದ ಪ್ರತಿಜ್ಞೆ ಮಾಡಬೇಕು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯವಿಶ್ವಾಸವನ್ನು ಒಂದು ವೃಕ್ಷಕ್ಕೆ ಹೋಲಿಸಿ ಹೀಗೆ ಹೇಳಿದರು: "ಸತ್ಯವಿಶ್ವಾಸ ಒಂದು ವೃಕ್ಷದ ಹಾಗಿದೆ. ಅತ್ಯುತ್ತಮ ಜಾತಿಯ ಮರಗಳು ಸಹ ಲಾಭದಾಯಕವಾಗಬೇಕಾದರೆ ಅದನ್ನು ಬೆಳೆಸುವುದರಲ್ಲಿ ಅತ್ಯಂತ ಹೆಚ್ಚು ಶ್ರದ್ಧೆ ವಹಿಸಬೇಕಾಗುತ್ತದೆ. ಆಗ ಮಾತ್ರ ಅದು ಲಾಭದಾಯಕವಾಗಿ ಬೆಳೆಯುತ್ತದೆ. ಅದು ಜೀವಂತವಾಗಿರಬೇಕಾದರೆ ಅದರ ಕಡೆಗೆ ಯಾವಾಗಲೂ ಶ್ರದ್ಧೆ ವಹಿಸಬೇಕಾಗುತ್ತದೆ. ಇದೇ ರೀತಿ ಸತ್ಯವಿಶ್ವಾಸವನ್ನು ಪರಿಪೂರ್ಣಗೊಳಿಸಲು ಸತ್ಕರ್ಮಗಳ ಆವಶ್ಯಕತೆ ಇರುತ್ತದೆ. ಸತ್ಯವಿಶ್ವಾಸವನ್ನು ಸತ್ಕರ್ಮಗಳ ಮೂಲಕ ಪೋಷಿಸುವ ಆವಶ್ಯಕತೆ ಇರುತ್ತದೆ. ಸತ್ಕರ್ಮವಿಲ್ಲದಿದ್ದರೆ ಸತ್ಯವಿಶ್ವಾಸಿ ಎಂದು ಹೇಳಿಕೊಳ್ಳುವುದರಿಂದ ಯಾರೂ ಸತ್ಯವಿಶ್ವಾಸಿ(ಮೂಮಿನ್) ಆಗಲಾರ. ಸತ್ಕರ್ಮಗಳನ್ನು ಮಾಡದೆ ತಾನು ಸತ್ಯವಿಶ್ವಾಸಿ ಎಂದು ಹೇಳಿಕೊಳ್ಳುವವನು, ಸುಂದರ ಕೊಂಬೆ ರೆಂಬೆಗಳು ಕಡಿಯಲ್ಪಟ್ಟು ಕುರೂಪಗೊಳಿಸಲಾದ ಒಂದು ಮರದ ಹಾಗೆ ಆಗುತ್ತಾನೆ. ಅಂತಹ ಮರದ ಹಣ್ಣುಹಂಪಲುಗಳು ನಾಶಗೊಳಿಸಲ್ಪಟ್ಟಿರುತ್ತವೆ. ಅದರ ನೆರಳು ದೇವನ ಸೃಷ್ಟಿಗಳಿಗೆ ದೊರಕದಂತಾಗಿದೆ. ಇಂತಹ ಕೊಂಬೆ ರೆಂಬೆಗಳು ಕಡಿಯಲ್ಪಟ್ಟ ಮತ್ತು ಯಾವುದೇ ರೀತಿ ಲಾಭದಾಯಕವಾಗದ ಮರದ ಕಡೆಗೆ ಯಾರೂ ನೋಡಲಾರರು. ಯಾರೂ ಅದರ ಕಡೆಗೆ ಗಮನ ಹರಿಸಲಾರರು.

ಹಚ್ಚಹಸುರಾಗಿ ನಳನಳಿಸುತ್ತಿರುವ ಗಿಡ ಮರಗಳ ಕಡೆಗೆ ಪ್ರತಿಯೊಬ್ಬನ ದೃಷ್ಟಿ ಹರಿಯುವುದು. ಅದರ ಸೌಂದರ್ಯ ಕಾಣಿಸುತ್ತಿರಬೇಕು. ಅದು ಆಯಾಕಾಲದಲ್ಲಿ ಫಲ ಪುಷ್ಪಗಳಿಂದ ಭರಿತವಾಗಿರಬೇಕು. ಅದು ಬೇಸಗೆಯಲ್ಲಿ ನೆರಳು ನೀಡುವುದಾಗಿರಬೇಕು. ಅಂತಹ ಗಿಡ ಮರಗಳನ್ನು ಜನರು ಇಷ್ಟಪಡುತ್ತಾರೆ. ಸತ್ಯವಿಶ್ವಾಸವು ನಿಸ್ಸಂಶಯವಾಗಿಯೂ ಬಲವಾದ ಬೇರಿನ ಹಾಗಿರುತ್ತದೆ. ಪ್ರತಿಯೊಬ್ಬ ಮುಸ್ಲಿಮನು ತನ್ನ ವಿಶ್ವಾಸ ಬಲಿಷ್ಠವಾಗಿದೆ ಎಂದು ವಾದಿಸುತ್ತಾನೆ. ಬಹುತೇಕ ಮುಸ್ಲಿಮರು ಹೀಗೆ ವಾದಿಸುವುದಾಗಿ ನಾವು ಕಾಣುತ್ತೇವೆ. ಅವರಲ್ಲಿ ಬಹಳ ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ಅಭಿಮಾನ ಸಹ ಇದೆ. ಅವರು ಇಸ್ಲಾಮಿನ ಹೆಸರಿನಲ್ಲಿ ಸಾಯಲು ಮತ್ತು ಸಾಯಿಸಲು ಸಿದ್ಧರಾಗಿರುತ್ತಾರೆ. ಆದರೆ, ಏನು ಅವರು ಜನರಿಗೆ ಲಾಭವನ್ನುಂಟುಮಾಡುವಂತಹ ಸುಂದರ ವೃಕ್ಷ ಅಥವಾ ತೋಟದ ಹಾಗೆ ಇದ್ದಾರೆಯೇ? ಜನರು ಅದರ ಸುಂದರ ರೂಪವನ್ನು ಕಂಡು ಅದರ ಕಡೆಗೆ ಗುಂಪು ಗುಂಪಾಗಿ ಹೋಗುತ್ತಿರುವರೇ?

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಂದ ಧರ್ಮ ಶತ್ರುಗಳನ್ನು ಸಹ ಅದರ ಕಡೆಗೆ ಎಳೆದುಕೊಂಡು ಬಂದಿತ್ತು. ಅದು ಅವರನ್ನು ಸ್ನೇಹಿತರನ್ನಾಗಿ ಮಾಡಿತಲ್ಲದೆ ಅವರು ಅದನ್ನು ತೀವ್ರವಾಗಿ ಪ್ರೀತಿಸುವಂತೆ ಮಾಡಿತ್ತು. ಆ ಮುಸ್ಲಿಮರು ಮಹತ್ವಶಾಲಿಗಳಾದುದು ಅವರು ವಿಶ್ವಾಸದೊಂದಿಗೆ ಜನರಿಗೆ ಹಿತಕರವಾದ ಸತ್ಕರ್ಮಗಳನ್ನು ಸಹ ಮಾಡಿದುದರಿಂದಾಗಿದೆ. ಅಲ್ಲದೆ ಕೇವಲ ವಿಶ್ವಾಸದ ಬಗ್ಗೆ ವಾದಿಸಿ ಅದರ ದೃಢತೆಯ ಬಗ್ಗೆ ಪ್ರಕಟಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಸತ್ಯವಿಶ್ವಾಸದೊಂದಿಗೆ ಸತ್ಕರ್ಮಗಳೆಂಬ ಹಚ್ಚಹಸುರಾದ ಕೊಂಬೆಗಳೂ ಫಲಗಳೂ ಕಾಣಿಸಕೊಂಡು ಅವು ಜನರಿಗೆ ಪ್ರಯೋಜನಕರವಾಗಿರಬೇಕು. ಇಂತಹ ಸೌಂದರ್ಯ ಮತ್ತು ಪ್ರಯೋಜನ ಕಾಣಿಸಿಕೊಂಡರೆ ಲೋಕವು ಅದರ ಕಡೆಗೆ ಗಮನ ಹರಿಸುವುದು ಮಾತ್ರವಲ್ಲ ಅದರ ಸಮೀಪ ಜಮಾಯಿಸುತ್ತದೆ ಮತ್ತು ಅದರ ಸಂರಕ್ಷಣೆಗೆ ಸಹ ಪ್ರಯತ್ನವನ್ನು ಮಾಡುತ್ತದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಮರೊಂದಿಗೆ ಕೇವಲ ಸತ್ಯವಿಶ್ವಾಸವನ್ನು ಬಲಪಡಿಸಲು ಹೇಳಿಲ್ಲ. ಪವಿತ್ರ ಖುರ್‌ಆನಿನಲ್ಲಿ ಎಲ್ಲೆಲ್ಲಿ ಸತ್ಯವಿಶ್ವಾಸದ ಬಗ್ಗೆ ಪ್ರಸ್ತಾಪಿಸಲಾಗಿದೆಯೋ ಅಲ್ಲೆಲ್ಲಾ ಸತ್ಕರ್ಮಗಳನ್ನು ಸತ್ಯವಿಶ್ವಾಸದೊಂದಿಗೆ ಜೋಡಿಸಿ ಅದರ ಶರತ್ತನ್ನಾಗಿ ಅಲ್ಲಾಹನು ಮಾಡಿದ್ದಾನೆ. ಜನರಲ್ಲಿ ಈ ಸ್ಥಿತಿಯನ್ನು ಉಂಟುಮಾಡಲು ಅಲ್ಲಾಹನು ಪ್ರವಾದಿಗಳನ್ನು ಕಳುಹಿಸುತ್ತಾನೆ. ತಮ್ಮ ಕಾಲದ ಪ್ರವಾದಿಯೊಂದಿಗೆ ಸಂಬಂಧ ಸ್ಥಾಪಿಸುವವರಲ್ಲಿ ಮಾತ್ರ ಈ ಸ್ಥಿತಿ ಉಂಟಾಗುತ್ತದೆ. ಯಾವ ಧರ್ಮ ಮುಸ್ಲಿಮೇತರರಾದ ಜನರ ಪ್ರೀತಿಯನ್ನು ಬಾಚಿಕೊಂಡಿತೋ ಮತ್ತು ಮುಸ್ಲಿಮ್ ಸರಕಾರಗಳ ಸಂರಕ್ಷಣೆಗೆ ಮುಸ್ಲಿಮರೊಂದಿಗೆ ಮುಸ್ಲಿಮೇತರರೂ ಹೋರಾಡಿದರೋ ಆ ಧರ್ಮದ ಸ್ಥಿತಿ ಈಗ ಹೇಗಿದೆ ಎಂದು ಒಮ್ಮೆ ನೋಡಿರಿ. ಮುಸ್ಲಿಮೇತರರನ್ನು ಅದರ ಕಡೆಗೆ ಎಳೆಯುವುದಂತೂ ಇರಲಿ,

ಮುಸ್ಲಿಮರ ಪರಸ್ಪರ ಸ್ಥಿತಿ ಹೇಗಿದೆ ಎಂದರೆ ಅವರು ಸತ್ಕರ್ಮಗಳಿಂದ ವಿಮುಖರಾದ ಕಾರಣ (**ಖುಲೂಬುಹುಂ ಶತ್ತಾ**) ಒಡೆದು ಹೋದ ಹೃದಯಗಳನ್ನು ಅವರು ಲೋಕಕ್ಕೆ ತೋರಿಸಿ ಕೊಡುತ್ತಿದ್ದಾರೆ.

ಇಂದಿನ ಕಾಲದಲ್ಲಿ ಸರಿಯಾದ ಇಸ್ಲಾಮೀ ಸತ್ಕಾರ್ಯಗಳ ಚಿತ್ರವನ್ನು ಲೋಕದ ಮುಂದಿರಿಸುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಈ ಕಾಲಘಟ್ಟದ ಪ್ರವಾದಿಯನ್ನು ನಂಬಿದವರ ಕರ್ತವ್ಯ ಇದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಥಾಪಿಸಿದ ಜಮಾಅತ್ ಅಲ್ಲಾಹನು ನೆಟ್ಟ ಮರವಾಗಿದೆ. ಅದರ ಬೇರುಗಳು ಬಲಿಷ್ಠವಾಗಿದ್ದು ಅದರ ಕೊಂಬೆಗಳು ಹಚ್ಚ ಹಸುರಾಗಿಯೂ ಫಲಪುಷ್ಪಭರಿತವಾಗಿಯೂ ಸುಂದರವಾಗಿಯೂ ಶೋಭಿಸುತ್ತಿದೆ. ಅದು ಲೋಕದ ಗಮನವನ್ನು ತನ್ನ ಕಡೆಗೆ ಆಕರ್ಷಿಸುತ್ತಾ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಯಥಾರ್ಥ ಇಸ್ಲಾಮ್ ಧರ್ಮದ ತತ್ವಗಳನ್ನು ನಮಗೆ ಕಲಿಸಿದ ಕಾರಣದಿಂದ ನಮ್ಮಲ್ಲಿ ಈ ಮಾರ್ಪಾಟು ಉಂಟಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಪದೇಶಗಳನ್ನು ಅನುಸರಿಸಿ ನಡೆಯಲು ನಮಗೆ ಆಗ್ರಹಪೂರ್ಣವಾಗಿ ಉಪದೇಶಿಸಲಾಯಿತು. ಅದರ ಮಹತ್ವವನ್ನು ನಮಗೆ ವಿವರಿಸಿ ಕೊಡಲಾಯಿತು.

ಆಫ್ರಿಕದ ಒಂದು ದೇಶದಲ್ಲಿ ಒಂದು ಹೊಸ ಮಸ್‌ಜಿದನ್ನು ಉದ್ಘಾಟಿಸುವ ಸಂದರ್ಭದಲ್ಲಿ ಅಲ್ಲಿನ ಮುಖ್ಯಸ್ಥ (ಚೀಫ್)ರನ್ನು ಆಮಂತ್ರಿಸಲಾಗಿತ್ತು. ಅವರು ಕ್ರೈಸ್ತ ಧರ್ಮಾನುಯಾಯಿ ಆಗಿದ್ದರು. ಅವರು ಹೇಳಿದರು: "ನಾನು ಇಲ್ಲಿಗೆ ಬಂದುದು ನಿಮ್ಮ ಮೇಲಿನ ಪ್ರೀತಿಯಿಂದಲ್ಲ. ಒಬ್ಬ ಮುಸ್ಲಿಮೇತರನಾದ ಕ್ರೈಸ್ತನನ್ನು ತಮ್ಮ ಮಸ್‌ಜಿದ್ ಉದ್ಘಾಟನೆಗೆ ಆಮಂತ್ರಿಸುವ ಈ ಮುಸ್ಲಿಮರು ಎಂತಹ ಜನರು ಎಂದು ನೋಡಲು ನಾನು ಇಲ್ಲಿಗೆ ಬಂದಿದ್ದೇನೆ. ಇಲ್ಲಿಗೆ ಬಂದಾಗ ನನಗೆ ತುಂಬಾ ಆಶ್ಚರ್ಯವಾಯಿತು. ಇಲ್ಲಿ ವಿವಿಧ ಧರ್ಮಗಳ ಜನರು ಜಮಾಯಿಸಿದ್ದಾರೆ. ಅಹ್ಮದಿಯರು ಮುಸ್ಲಿಮರಾಗಿದ್ದರೂ ಇಂತಹ ಉನ್ನತ ಮಟ್ಟದ ಸ್ವಭಾವ ಗುಣಗಳನ್ನು ಪ್ರಕಟಿಸುತ್ತಿರುವುದು ಅನುಪಮೇಯವಾಗಿದೆ."

ಇಂತಹ ವೃಕ್ಷಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ "ಅವುಗಳ ಬೇರುಗಳು ನೆಲದಲ್ಲಿ ಬಲಿಷ್ಠವಾಗಿರುತ್ತವೆ." ಎಂದು ಅಲ್ಲಾಹನು ಹೇಳಿರುವನು. ಸತ್ಯವಿಶ್ವಾಸ ಮತ್ತು ಸತ್ಕರ್ಮಗಳನ್ನು ಹೊಂದಿರುವ ಮನುಷ್ಯರನ್ನು ಮರಗಳಿಗೆ ಹೋಲಿಸಿ ಹೇಳುವುದಾದರೆ ಅದರ ಹಚ್ಚ ಹಸುರಾದ ಕೊಂಬೆಗಳು ಆಕಾಶದ ಉನ್ನತಿಯನ್ನು ಸ್ಪರ್ಶಿಸುತ್ತಾ ಇರುತ್ತವೆ.

ನಾನು ಹೇಳಿದ ಹಾಗೆ ಈ ಕಾಲಘಟ್ಟದ ಇಮಾಮರೊಂದಿಗೆ ಸಂಬಂಧ ಹೊಂದಿರುವ ಕಾರಣ ಪ್ರತಿಯೊಬ್ಬ ಅಹ್ಮದಿ ಸತ್ಯವಿಶ್ವಾಸವನ್ನು ಬಲಪಡಿಸುವ ಜೊತೆಗೆ ಸತ್ಕರ್ಮನಿರತರಾಗಿ ಹಚ್ಚ ಹಸುರಾದ ಕೊಂಬೆಗಳ ಹಚ್ಚ ಹಸುರಾದ ಎಲೆಗಳ ಹಾಗೆ ಮತ್ತು ಸುಂದರ ಫಲ ಪುಷ್ಪಗಳ ಹಾಗೆ ಶೋಭಿಸುತ್ತಾ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಅದು ಲೋಕಕ್ಕೆ ಸುಂದರವಾಗಿ ಕಾಣಿಸಬೇಕಲ್ಲದೆ ಜನರಿಗೆ ಪ್ರಯೋಜನಕರವೂ ಆಗಬೇಕು. ಎಲ್ಲಾ ರೀತಿಯ ಕಲಹ ಪಿತೂರಿಗಳಿಂದ ದೂರವಿರಬೇಕು. ಪರದೂಷಣೆ ಮಾಡುವ ಸ್ವಭಾವವನ್ನಾಗಲೀ ಅನ್ಯರನ್ನು ತಾತ್ಸಾರ ಭಾವದಿಂದ ಕಾಣುವ ಸ್ವಭಾವವಾಗಲಿ ಇರಬಾರದು. ಕರುಣೆ ರಹಿತರಾಗಿರಬಾರದು. ಉಪಕಾರ ಮಾಡಿ ಅದರ ಬಗ್ಗೆ ಚುಚ್ಚು ಮಾತು ಆಡುವವರೂ ಆಗಬಾರದು. ಉತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸುವವರಾಗಬೇಕು.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪದೇ ಪದೇ ಉನ್ನತ ಮಟ್ಟದ ಉತ್ತಮ ಸ್ವಭಾವ ಗುಣಗಳನ್ನು ಹೊಂದುವ ಬಗ್ಗೆ ಮತ್ತು ಸತ್ಕರ್ಮಗಳನ್ನು ಮಾಡುವ ಬಗ್ಗೆ ಆಗ್ರಹಪಡಿಸಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ಯಾ ಅಯ್ಯುಹಲ್ಲಝೀನ ಆಮನೂ ಲಾತುಬ್‌ತಿಲೂ ಸದಖಾತಿಕುಮ್ ಬಿಲ್‌ಮನ್ನಿ ವಲ್ ಅಝಾ.** "ಓ ಸತ್ಯವಿಶ್ವಾಸಿಗಳೇ, ನೀವು ಮಾಡಿದ ಉಪಕಾರಗಳ ಬಗ್ಗೆ ನೆನಪು ಹುಟ್ಟಿಸಿಯೂ ಮನ ನೋಯಿಸುವ ಮಾತನ್ನಾಡಿಯೂ ನಿಮ್ಮ ದಾನ ಧರ್ಮಗಳನ್ನು ನಿಷ್ಫಲಗೊಳಿಸಬೇಡಿರಿ"

ಇಂತಹ ಜನರು ಅಲ್ಲಾಹನ ಬಗ್ಗೆಯಾಗಲಿ ಅಂತಿಮ ದಿನದ ಬಗ್ಗೆಯಾಗಲಿ ವಿಶ್ವಾಸವಿಲ್ಲದವರಾಗಿದ್ದಾರೆ. ಅವರ ವಿಶ್ವಾಸ ಬಲಹೀನ ಮಾತ್ರವಲ್ಲ ಅವರು ವಿಶ್ವಾಸವಿಲ್ಲದವರೇ ಆಗಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಿವಿಧ ಕಡೆಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಸತ್ಯವಿಶ್ವಾಸದೊಂದಿಗೆ ಸತ್ಕರ್ಮಗಳೂ ಆವಶ್ಯಕವಾಗಿವೆ ಎಂದೂ ಅವುಗಳಿಂದ ವಿವಿಧ ಪ್ರಯೋಜನಗಳಿವೆ ಎಂದೂ ಸತ್ಯವಿಶ್ವಾಸಿಗಳಿಗೆ ಪದೇ ಪದೇ ಆದೇಶಿಸಿದ್ದಾನೆ. ಸತ್ಯವಿಶ್ವಾಸಿ ಸತ್ಕರ್ಮಗಳ ಮೂಲಕ ಅನ್ಯರಿಗೆ ಪ್ರಯೋಜನ ನೀಡುತ್ತಾನಲ್ಲದೆ ಅವನು ಸ್ವತಃ ಅದರ ಸಿಹಿಯಾದ ಫಲಗಳನ್ನು ತಿನ್ನುತ್ತಾ ಇರುತ್ತಾನೆ. ಸತ್ಯವಿಶ್ವಾಸವನ್ನು ಹೊಂದಿ ಸತ್ಕರ್ಮಗಳನ್ನು ಮಾಡುವವರು ಅಲ್ಲಾಹನಿಂದ ಕ್ಷಮೆಯನ್ನು ಗಳಿಸುವವರಾಗುವರೆಂದು ಅಲ್ಲಾಹನು ಹೇಳಿದ್ದಾನೆ. ಅವರು ಉನ್ನತ ಆಧ್ಯಾತ್ಮಿಕ ಸ್ಥಾನ ಗಳಿಸುವರು. ಅಲ್ಲಾಹನು ಅವರ ಬಗ್ಗೆ ಹೀಗೆ ಹೇಳಿದ್ದಾನೆ: **ಇನ್ನಲ್ಲಝೀನ ಆಮನೂ ವ ಅಮಿಲುಸ್ಸಾಲಿಹಾತಿ ಸಯಜ್‌ಅಲು ಲಹುಮುರ್ರಹ್ಮಾನು ಉದ್ದನ್.** "ಸತ್ಯವಿಶ್ವಾಸಿಗಳಾಗಿ ಸತ್ಕರ್ಮಗಳನ್ನು ಮಾಡುವವರಿಗೆ ಅಲ್ಲಾಹನು ವಿಶೇಷ ಪ್ರೀತಿಯನ್ನು ಹುಟ್ಟಿಸುವನು." ಅರಬಿಯಲ್ಲಿ ಉದ್ದ್ ಎಂಬ ಪದ ಬಳಸಲಾಗಿದೆ. ಉದ್ದ್ ಎಂದರೆ ಗಾಢವಾದ ಪ್ರೀತಿ ಎಂದು ಅರ್ಥ. ತೋರಿಕೆಯ ಪ್ರೀತಿ ಅಲ್ಲ ಗಾಢವಾದ ಪ್ರೀತಿ ಮತ್ತು ಸಂಬಂಧವನ್ನು ಈ ಪದ ಸೂಚಿಸುತ್ತದೆ. ಅದು ಎಂದೂ ಮುರಿದು ಹೋಗಲಾರದು. ನೆಲದಲ್ಲಿ ಗೂಟವನ್ನು ನಾಟಿದಾಗ ಅದೆಷ್ಟು ಬಲವಾಗಿ ನಾಟಿರುತ್ತದೆಯೋ ಅದರ ಹಾಗೆ ಈ ಪ್ರೀತಿ ಇರುತ್ತದೆ. ಇಂತಹ ಪ್ರೀತಿ ಹೃದಯದಲ್ಲಿ ಜನಿಸುವುದು. ಪವಿತ್ರ ಖುರ್‌ಆನಿನ ಈ ವಚನದ ಅರ್ಥವೇನೆಂದರೆ ಬಲಿಷ್ಠವಾದ ವಿಶ್ವಾಸ ಹೊಂದಿ ಸತ್ಕಾರ್ಯಗಳನ್ನು ಮಾಡುವ ಸತ್ಯವಿಶ್ವಾಸಿಗಳ ಹೃದಯಗಳಲ್ಲಿ ಅಲ್ಲಾಹನು ತನ್ನ ಪ್ರೀತಿಯನ್ನು ಗೂಟದ ಹಾಗೆ ನಾಟುವನು. ಅವರು ಅಲ್ಲಾಹನನ್ನು ಗಾಢವಾಗಿ ಪ್ರೀತಿಸಿ ತಮ್ಮ ಸತ್ಕರ್ಮಗಳಲ್ಲಿ ಮುಂದುವರಿಯುವರು. ಆದುದರಿಂದ ಒಬ್ಬ ನಿಜವಾದ ಸತ್ಯವಿಶ್ವಾಸಿ ಎಂದೂ ಬೇರೆ ಜನರಿಗೆ ಕಷ್ಟ ನೀಡುವ ಬಗ್ಗೆ ಯೋಚಿಸಲು ಸಾಧ್ಯವೇ ಇಲ್ಲ. ಮಾನವ ಪ್ರೇಮ ಆವಶ್ಯಪಡುವುದೇನೆಂದರೆ ಒಬ್ಬ ನಿಜವಾದ ಸತ್ಯವಿಶ್ವಾಸಿ ಯಾವಾಗಲೂ ಅನ್ಯರಿಗೆ ಉಪಕಾರ ಮಾಡುವ

ಬಗ್ಗೆ ಯೋಚಿಸುತ್ತಾನೆ. ನಾನು ಹಿಂದೆ ಹೇಳುತ್ತಾ ಇದ್ದ ಹಾಗೆ ಮುಸ್ಲಿಮರಲ್ಲಿ ಇಂತಹ ಮನೋಭಾವ ಹುಟ್ಟುವುದಾದರೆ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಕಿತ್ತುಕೊಳ್ಳುವ, ದೌರ್ಜನ್ಯಮಾಡುವ, ಅನ್ಯರನ್ನು ಕೊಲ್ಲುವ ಕೆಲಸ ಸರಕಾರಗಳಾಗಲಿ, ಇಸ್ಲಾಮಿನ ಹೆಸರಿನಲ್ಲಿ ಕಾರ್ಯ ಪ್ರವೃತ್ತವಾಗಿರುವ ಸಂಘಟನೆಗಳಾಗಲಿ, ಮುಸ್ಲಿಮ್ ಜನಸಾಮಾನ್ಯರಾಗಲಿ ಮಾಡುವುದನ್ನು ಎಂದೂ ಕಾಣಲು ಸಾಧ್ಯವಾಗದು.

ಅಲ್ಲಾಹನು ನೀಡಿದ ಉಪದೇಶಗಳ ಪ್ರಕಾರ ಯಾರೂ ವರ್ತಿಸುವುದಿಲ್ಲವಾದ ಕಾರಣದಿಂದಲೇ ಈ ದೌರ್ಜನ್ಯಗಳು ಮುಂದುವರಿಯುತ್ತಿವೆ. ಆದರೆ ಈ ಜನರು ದೌರ್ಜನ್ಯಗಳನ್ನು ಅಲ್ಲಾಹನ ಹೆಸರು ಬಳಸಿ ಮಾಡುತ್ತಿರುವುದು ಅತ್ಯಂತ ದೊಡ್ಡ ಅಕ್ರಮವಾಗಿದೆ. ಅಲ್ಲಾಹನು ಹೇಳುವುದು– ನೀವು ಪ್ರೀತಿಯನ್ನು, ಗಾಢವಾದ ಪ್ರೀತಿಯನ್ನು, ಹೃದಯದಲ್ಲಿ ಬಲವಾಗಿ ನಾಟಿರುವ ಪ್ರೀತಿಯನ್ನು ಹುಟ್ಟಿಸಿರಿ ಎಂದಾಗಿದೆ. ಅನ್ಯರಿಗೆ ಪ್ರಯೋಜನ ನೀಡುವವರಾಗಲು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನು ಉಪದೇಶಿಸಿದ ಪ್ರಕಾರ ವರ್ತಿಸುವುದಾದರೆ ಈಗ ನಡೆಯುತ್ತಿರುವ ದೌರ್ಜನ್ಯಗಳು ಎಂದೂ ಕಾಣಿಸಲಾರವು. ಇಸ್ಲಾಮಿನ ಬಗ್ಗೆ ನೆರಳು ನೀಡುವ ಸುಂದರ ವೃಕ್ಷ ಎಂಬ ಭಾವನೆ ಲೋಕದ ಜನರಲ್ಲಿ ಹುಟ್ಟುವುದು.

ಮೇಲೆ ಉಲ್ಲೇಖಿಸಿದ ವಚನದ ಇನ್ನೊಂದು ಅರ್ಥ ಹೀಗೆ: “ಲೋಕದ ಜನರಲ್ಲಿ ಮುಸ್ಲಿಮರ ಬಗ್ಗೆ ಗಾಢವಾದ ಪ್ರೀತಿ ಹುಟ್ಟುವುದು” ಈ ರೀತಿ ಜನರ ಮನಸ್ಸನ್ನು ಪರಿವರ್ತಿಸಲು ಅಲ್ಲಾಹನಿಗೆ ಸಾಧ್ಯವಿದೆ. ಆದರೆ ಇದಕ್ಕೋಸ್ಕರ ಸತ್ಯವಿಶ್ವಾಸದ ಜೊತೆ ಸತ್ಕರ್ಮಗಳ ಆವಶ್ಯಕತೆ ಶರತ್ತಾಗಿದೆ. ಇಸ್ಲಾಮಿನ ಆರಂಭದ ಕಾಲಘಟ್ಟದಲ್ಲಿ ಮುಸ್ಲಿಮರ ಬಗ್ಗೆ ಅನ್ಯರ ಹೃದಯಗಳಲ್ಲಿ ಇಂತಹ ಪ್ರೀತಿ ಇತ್ತು. ಯಹೂದಿ ಜನರಲ್ಲೂ ಕ್ರೈಸ್ತರಲ್ಲೂ ಇಂತಹ ಭಾವನೆಯನ್ನು ಅಲ್ಲಾಹನು ಸೃಷ್ಟಿಸಿದ್ದನು. ಮುಸ್ಲಿಮರು ಒಂದು ದೇಶವನ್ನು ಬಿಟ್ಟು ಹೋಗುವಾಗ ಈ ಜನರು ಅಳುತ್ತಿದ್ದರು. ಮತ್ತು ಪುನಃ ತಿರುಗಿ ಬರಲು ಪ್ರಾರ್ಥಿಸುತ್ತಿದ್ದರು. ಯಹೂದಿಯರು ಹೀಗೆ ಹೇಳಿದುದಾಗಿ ಚರಿತ್ರೆಯಲ್ಲಿ ಬರೆದಿದೆ: ಶತ್ರು ಸೈನಿಕರು ನಗರವನ್ನು ಪ್ರವೇಶಿಸದಂತೆ ಮಾಡಲು ನಾವು ಜೀವಕೊಡುವೆವು. ನೀವು ಇಲ್ಲಿಂದ ಹೋಗಬೇಡಿರಿ ನಾವು ನಿಮ್ಮನ್ನು ಸಂರಕ್ಷಿಸುವೆವು ಎಂದು. ಅವರು ಈ ರೀತಿ ಹೇಳಿದುದು ಮುಸ್ಲಿಮರ ಉತ್ತಮ ಗುಣಗಳ ಕಾರಣದಿಂದಾಗಿದೆ. ಅವರ ಸದ್ಗುಣಗಳು ಸುಂದರ ವೃಕ್ಷದ ಹಾಗೆ ಜನರ ಗಮನ ಸೆಳೆಯಿತು ಮತ್ತು ಅವರಿಗೆ ಪ್ರಯೋಜನ ನೀಡಿತು.

ಇಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯಸಂಧನಾದ ಗುಲಾಮನ ಗುಲಾಮರಾದ ಅಹ್ಮದಿಯರ ಕಡ್ಡಾಯ ಕರ್ತವ್ಯವೇನೆಂದರೆ ಅವರು ತಮ್ಮ ವಿಶ್ವಾಸದ ಬೇರುಗಳನ್ನು ಬಲಪಡಿಸುವುದರೊಂದಿಗೆ ಇಸ್ಲಾಮಿನ ಸುಂದರ ಎಲೆ ಕೊಂಬೆ ಮತ್ತು ಫಲಗಳಾಗಬೇಕು. ಅವು ಇಸ್ಲಾಮಿನ ಸೌಂದರ್ಯದ ಕಡೆಗೆ ಲೋಕವನ್ನು ಆಕರ್ಷಿಸಬೇಕು. ಅವು ಲೋಕಕ್ಕೆ ಹಿತಕಾರಿಯಾಗಬೇಕು. ನಾವು ಅಲ್ಲಾಹನನ್ನು ಪ್ರೀತಿಸುವವರೂ ಅವನ ಬಗ್ಗೆ ಪ್ರೀತಿಯನ್ನು ಹುಟ್ಟಿಸುವವರೂ ಮತ್ತು ಅವನ ಪ್ರೀತಿಯನ್ನು ಗಳಿಸುವವರೂ ಆಗಬೇಕು. ನಾವು ಮಾನವರನ್ನು ಪ್ರೀತಿಸುವವರೂ ಅವರ ಗಮನ ನಮ್ಮ ಕಡೆಗೆ ಆಕರ್ಷಿಸುವವರೂ ಆಗಬೇಕು. ಹೀಗೆ ಮಾಡದಿದ್ದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಉದ್ದೇಶ ಈಡೇರಿಸುವವರಾಗಲಾರೆವು. ನಾವು ನಮ್ಮ ಅನುಷ್ಠಾನ ಕರ್ಮಗಳ ಬಗ್ಗೆ ಗಮನ ಹರಿಸಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಲೇಖನಗಳಲ್ಲೂ ವಿವಿಧ ಸಂದರ್ಭಗಳಲ್ಲೂ ಸಭೆಗಳಲ್ಲೂ ಉಪದೇಶಿಸಿದ್ದಾರೆ ಅಲ್ಲಾಹನ ಸಂಪ್ರೀತಿ ಗಳಿಸುವಂತಹ ಮತ್ತು ಲೋಕವನ್ನು ಕಷ್ಟದಿಂದ ರಕ್ಷಿಸುವಂತಹ ಸತ್ಕರ್ಮಗಳನ್ನು ಮಾಡಲು ಅವರು ಹೇಳಿರುತ್ತಾರೆ. ಆ ಬಗ್ಗೆ ಅವರು ಹೇಳಿದ ಕೆಲವು ಉಪದೇಶಗಳನ್ನು ನಿಮ್ಮ ಮುಂದಿರಿಸುತ್ತೇನೆ. ಅವರು ಹೇಳಿದರು:

“ನಾನು ನೀಡಿದ ಉಪದೇಶಗಳನ್ನು ತನ್ನ ಮಾರ್ಗದರ್ಶಕ ಸೂತ್ರಗಳನ್ನಾಗಿ ಮಾಡಿಕೊಳ್ಳುವವನೇ ನಮ್ಮ ಜಮಾಅತಿಗೆ ಪ್ರವೇಶಿಸುತ್ತಾನೆ. ಅವನು ತನ್ನ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಅವುಗಳ ಪ್ರಕಾರ ಕೆಲಸ ಮಾಡುತ್ತಾನೆ. ಜಮಾಅತಿನಲ್ಲಿ ಕೇವಲ ಹೆಸರು ಬರೆಯಿಸಿ ನಮ್ಮ ಜಮಾಅತಿನ ಉಪದೇಶಗಳ ಪ್ರಕಾರ ವರ್ತಿಸದವನು ನೆನಪಿಡಬೇಕು ಅಲ್ಲಾಹನು ಈ ಜಮಾಅತನ್ನು ಒಂದು ವಿಶಿಷ್ಟ ಜಮಾಅತನ್ನಾಗಿ ಮಾಡಲು ಉದ್ದೇಶಿಸಿದ್ದಾನೆ. ಕೇವಲ ಹೆಸರು ಬರೆಯಿಸುವ ಮೂಲಕ ಯಾರಿಗೂ ಈ ಜಮಾಅತಿನವನಾಗಲು ಸಾಧ್ಯವಿಲ್ಲ. ಅಂತಹ ವ್ಯಕ್ತಿ ಯಾವುದಾದರೊಂದು ಸಂದರ್ಭದಲ್ಲಿ ಜಮಾಅತಿನಿಂದ ಬೇರ್ಪಡುವನು. ಆದುದರಿಂದ ನಾವು ನೀಡುವ ಉಪದೇಶಗಳಿಗೆ ಅನುಸಾರವಾಗಿ ವರ್ತಿಸಲು ನಿಮಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡಿರಿ.”

“ಸತ್ಕರ್ಮಗಳು ರೆಕ್ಕೆಗಳ ಹಾಗಿವೆ. ಸತ್ಕರ್ಮಗಳನ್ನು ಮಾಡದಿದ್ದರೆ ಆಧ್ಯಾತ್ಮಿಕ ಉನ್ನತ ಪದವಿಯ ಕಡೆಗೆ ಹಾರಿ ಹೋಗಲು ಸಾಧ್ಯವಾಗಲಾರದು. ಅಲ್ಲಾಹನು ಸತ್ಕರ್ಮಗಳಿಗೆ ನಿಶ್ಚಯಿಸಿದ ಉನ್ನತ ಉದ್ದೇಶ ಲಕ್ಷ್ಯಗಳನ್ನು ತಲಪಲು ಸಾಧ್ಯವಾಗದು. ಮನುಷ್ಯನು ಅಲ್ಲಾಹನಿಗೆ ಭಯಪಡುವುದು ಆವಶ್ಯಕವಾಗಿದೆ. ಅಲ್ಲಾಹನ ಬಗ್ಗೆ ಭಯ ಹೊಂದುವುದರಿಂದ ಅನೇಕ ಅನುಗ್ರಹಗಳ ವಾರೀಸುದಾರರಾಗಬಹುದು. ಅಲ್ಲಾಹನಿಗೆ ಭಯಪಡುವವನೇ ಉತ್ತಮನು. ಯಾಕೆಂದರೆ, ಭಯದ ಕಾರಣದಿಂದ ಅವನಿಗೆ ಪ್ರಜ್ಞೆ ನೀಡಲ್ಪಡುತ್ತದೆ. ಆ ಕಾರಣದಿಂದ ಅವನು ಪಾಪಗಳಿಂದ ತನ್ನನ್ನು ರಕ್ಷಿಸುತ್ತಾನೆ. ಬಹಳ ಜನರು ಹೇಗಿರುತ್ತಾರೆಂದರೆ ಅವರು ತಮಗೆ ಅಲ್ಲಾಹನಿಂದ ದೊರೆತ ಅನುಗ್ರಹಗಳು, ಬಹುಮಾನಗಳು ಮತ್ತು ಗೌರವದ ಬಗ್ಗೆ ಚಿಂತಿಸಿ ಚಿಂತಾಮಗ್ನರಾಗಿ ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವುದರಿಂದ ತಮ್ಮನ್ನು ರಕ್ಷಿಸುತ್ತಾರೆ. ಬೇರೆ ಕೆಲವರು ಅಲ್ಲಾಹನ ಕ್ರೋಧದ ಬಗ್ಗೆ ಭಯ ಪಡುತ್ತಾರೆ. ಅಲ್ಲಾಹನು ಯಾರನ್ನು ಒಳ್ಳೆಯವನೆಂದು ನಿರ್ಧರಿಸುತ್ತಾನೋ ಅವನೇ ವಾಸ್ತವಿಕವಾಗಿಯೂ ಒಳ್ಳೆಯವನಾಗಿರುತ್ತಾನೆ. ಕೆಲವರು ತಮ್ಮನ್ನೇ ಮೋಸಗೊಳಿಸುತ್ತಾರೆ ಮತ್ತು ತಾವು ಮುತ್ತಖಿಗಳಾಗಿದ್ದೇವೆಂದು ಭಾವಿಸುತ್ತಾರೆ. ಆದರೆ ಅಲ್ಲಾಹನ ಸನ್ನಿಧಿಯಲ್ಲಿ ಯಾರು ಮುತ್ತಖಿ ಎಂದು ಬರೆಯಲ್ಪಟ್ಟಿರುವನೋ

ಅವನೇ ನಿಜವಾದ ಮುತ್ತಖಿಯಾಗಿರುತ್ತಾನೆ. ಈ ಲೋಕದಲ್ಲಿ ಅಲ್ಲಾಹನು ತನ್ನ ಸತ್ತಾರ್ ಎಂಬ ಗುಣ ವಿಶೇಷದ ಪ್ರಕಾರ ವರ್ತಿಸುತ್ತಾನೆ. ಆದರೆ ಪುನರುತ್ಥಾನದ ದಿನ ಮರೆಯಾಗಿರುವವುಗಳೆಲ್ಲವೂ ಅಲ್ಲಾಹನ ಪ್ರಕಾಶದಿಂದ ಬಹಿರಂಗವಾಗುವುವು. ಇಂದಿನ ಕಾಲದಲ್ಲಿ ಬಹಳ ದೊಡ್ಡ ಮುತ್ತಖಿಗಳೆಂದು ಗಣಿಸಲ್ಪಡುವ ಕೆಲವರು ಪುನರುತ್ಥಾನದ ದಿನದಂದು ಬಹಳ ಕೆಟ್ಟವರೆಂದು ಕಾಣಿಸುವರು. ಇದಕ್ಕೆ ಕಾರಣವೇನೆಂದರೆ ನಾವು ಭಾವಿಸುವುದೆಲ್ಲವೂ ಸತ್ಕರ್ಮಗಳಾಗಬೇಕೆಂದಿಲ್ಲ. ಯಾವುದೇ ಕುಂದು ಕೊರತೆಗಳಿಲ್ಲದ ಪರಿಶುದ್ಧ ಕರ್ಮಗಳೇ ನಿಜವಾದ ಸತ್ಕರ್ಮಗಳಾಗಿವೆ.''

ಸತ್ಕರ್ಮಗಳ ಆವಶ್ಯಕತೆಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ''ಬರೇ ನಾಲಗೆಯಿಂದ ಕಲಿಮ ಉಚ್ಚರಿಸಿದರೆ ಸಾಕಾಗಲಾರದು. '**ಅಸ್ತಗ್‌ಫಿರುಲ್ಲಾ**' ಎಂದು ಬರೇ ನಾಲಗೆಯಲ್ಲಿ ಹೇಳಿದರೆ ಅದರಿಂದ ಏನೂ ಪ್ರಯೋಜನ ಲಭಿಸಲಾರದು. ಏಕೆಂದರೆ ಅಲ್ಲಾಹನು ಮನುಷ್ಯನನ್ನು ಮನುಷ್ಯನಾಗಿ ಸೃಷ್ಟಿಸಿದ್ದಾನೆ. ಗಿಳಿಯಾಗಿ ಅಲ್ಲ. ಕೇವಲ ನಾಲಗೆಯಿಂದ ಶಬ್ದಗಳನ್ನು ಪುನರಾವರ್ತಿಸುವುದು ಗಿಳಿಯ ಕೆಲಸವಾಗಿದೆ. ಅದರ ಅರ್ಥ ಅದಕ್ಕೇನೂ ತಿಳಿದಿರುವುದಿಲ್ಲ. ನಾಲಗೆಯಿಂದ ಹೇಳುವುದನ್ನು ಯೋಚಿಸಿ ಹೇಳುವುದು ಮನುಷ್ಯನ ಕೆಲಸವಾಗಿದೆ. ಹೇಳುವ ಹಾಗೆ ಕೆಲಸ ಸಹ ಮಾಡಬೇಕಾಗಿದೆ.''

ಅವರು ಮತ್ತೂ ಹೇಳುತ್ತಾರೆ: ''ನೀವು ಚೆನ್ನಾಗಿ ನೆನಪಿಡಿರಿ. ಬಾಯಿ ಮಾತಿನ ಹರಟೆ ಯಾವುದೇ ಪ್ರಯೋಜನ ನೀಡಲಾರದು. ಮಾತಿನೊಂದಿಗೆ ಕೆಲಸ ಮಾಡದಿದ್ದರೆ ಮತ್ತು ಕೈಕಾಲುಗಳಿಂದಲೂ ಇತರ ಅಂಗಗಳಿಂದಲೂ ಉತ್ತಮ ಕೆಲಸ ಮಾಡದಿದ್ದರೆ ಯಾವ ಪ್ರಯೋಜನವೂ ಸಿಗಲಾರದು. ಅಲ್ಲಾಹನು ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿ ಸಹಾಬರಿಂದ ಕೆಲಸ ಮಾಡಿಸಿದನು. ಪವಿತ್ರ ಖುರ್‌ಆನನ್ನು ಓದಿದರೆ ಮಾತ್ರ ಸಾಕೆಂದು ಅವರು ಭಾವಿಸಿದರೆ? ಅಥವಾ ಅದರ ಆಜ್ಞೆ ಪ್ರಕಾರ ವರ್ತಿಸುವುದು ಆವಶ್ಯಕವೆಂದು ಅವರು ಭಾವಿಸಲಿಲ್ಲವೇ? ಅವರು ಎಂತಹ ಅನುಸರಣೆ ತೋರಿಸಿದರೆಂದರೆ ಅವರು ಆಡುಗಳ ಹಾಗೆ ವಧಿಸಲ್ಪಟ್ಟರು. ಅನಂತರ ಅವರು ಏನೆಲ್ಲಾ ಗಳಿಸಿದರು, ಅಲ್ಲಾಹನು ಅವರಿಗೆ ಎಂತಹ ಮಹತ್ವದ ಸ್ಥಾನ ನೀಡಿದನು ಎಂಬುದು ರಹಸ್ಯವಾದುದೇನೂ ಅಲ್ಲ.''

''ಅಲ್ಲಾಹನ ಅನುಗ್ರಹ ನೀವು ಗಳಿಸಲು ಬಯಸುವುದಾದರೆ ನೀವು ಏನಾದರೂ ಕೆಲಸ ಮಾಡಿ ತೋರಿಸಿರಿ. ಹಾಗೆ ಮಾಡದಿದ್ದರೆ ನೀವು ನಿರರ್ಥಕ ವಸ್ತುವಿನ ಹಾಗೆ ಎಸೆಯಲ್ಪಡುವಿರಿ. ಯಾವುದೇ ವ್ಯಕ್ತಿ ಒಳ್ಳೆಯ ವಸ್ತುಗಳನ್ನೂ ಚಿನ್ನ ಬೆಳ್ಳಿಗಳನ್ನೂ ಹೊರಗೆಸೆಯುವುದಿಲ್ಲ. ಅವುಗಳನ್ನು ಭದ್ರವಾಗಿ ಇಡಲಾಗುತ್ತಿದೆ. ಆದರೆ, ಮನೆಯಲ್ಲಿ ಒಂದು ಇಲಿ ಸತ್ತು ಬಿದ್ದಿದ್ದರೆ ಕೂಡಲೇ ಅದನ್ನು ಹೊರಗೆ ಎಸೆದು ಬಿಡುತ್ತೀರಿ. ಇದೇ ರೀತಿ ಅಲ್ಲಾಹನು ತನ್ನ ಒಳ್ಳೆಯ ದಾಸರನ್ನು ಯಾವಾಗಲೂ ಪ್ರೀತಿಸುತ್ತಾನೆ. ಅವರ ಆಯಸ್ಸನ್ನು ದೀರ್ಘಗೊಳಿಸುತ್ತಾನೆ. ಅವರ ಕೆಲಸಗಳಲ್ಲಿ ಅನುಗ್ರಹವಿರಿಸುತ್ತಾನೆ. ಅವರನ್ನು ನಾಶ ಮಾಡುವುದಿಲ್ಲ ಮತ್ತು ಅಪಮಾನಕರ ಮೃತ್ಯುವನ್ನು ಅವರಿಗೆ ನೀಡುವುದಿಲ್ಲ. ಅಲ್ಲಾಹನ '**ವಲಿ**' (ಸ್ನೇಹಿತನಾಗುವುದು) ಸುಲಭವೇನೂ ಅಲ್ಲ. ಅದು ಬಹಳ ಕಷ್ಟಕರವಾಗಿದೆ. ಅದಕ್ಕೋಸ್ಕರ ಕೆಟ್ಟ ಕೆಲಸಗಳನ್ನು ಮಾಡದಿರುವುದು ಕೆಟ್ಟ ನಿರ್ಧಾರಗಳನ್ನೂ ಭಾವನೆಗಳನ್ನೂ ಬಿಟ್ಟು ಬಿಡುವುದು ಆವಶ್ಯಕವಾಗಿದೆ. ಇವು ಕಷ್ಟದ ಕೆಲಸಗಳಾಗಿವೆ. ಗುಣ ನಡತೆಯ ಬಲಹೀನತೆಗಳನ್ನು ಮತ್ತು ಕೆಟ್ಟ ಕೆಲಸಗಳನ್ನು ಬಿಟ್ಟು ಬಿಡುವುದು ಕೆಲವರಿಗೆ ಬಹಳ ಕಷ್ಟಕರವಾಗುತ್ತದೆ. ಒಬ್ಬ ಕೊಲೆಗಡುಕ ಕೊಲ್ಲುವುದನ್ನು ಬಿಟ್ಟು ಬಿಡಲು ಸಾಧ್ಯವಿದೆ. ಕಳ್ಳನಿಗೆ ಕಳ್ಳತನ ಬಿಡಲು ಸಾಧ್ಯವಿದೆ. ಆದರೆ ಒಬ್ಬ ಕೆಟ್ಟ ಸ್ವಭಾವದವನಿಗೆ ತನ್ನ ಕೋಪವನ್ನು ಬಿಟ್ಟು ಬಿಡುವುದು ಕಷ್ಟಕರವಾಗುತ್ತದೆ. ಇದೇ ರೀತಿ ಅಹಂಕಾರಿಯಾದವನಿಗೆ ತನ್ನ ಅಹಂಕಾರವನ್ನು ಬಿಡುವುದು ಕಷ್ಟಕರವಾಗುತ್ತದೆ. ಏಕೆಂದರೆ ಅವನು ಅನ್ಯರನ್ನು ತಾತ್ಸಾರ ಭಾವದಿಂದ ಕಾಣುತ್ತಾನೆ. ಯಾರು ಅಲ್ಲಾಹನ ಮಹಿಮೆಯನ್ನು ಪರಿಗ್ರಹಿಸಿ ತನ್ನನ್ನು ಚಿಕ್ಕವನನ್ನಾಗಿ ಮಾಡಿ ಕೊಳ್ಳುತ್ತಾನೋ ಅವನನ್ನು ಅಲ್ಲಾಹನು ದೊಡ್ಡವನನ್ನಾಗಿ ಮಾಡುತ್ತಾನೆ. ನೀವು ದೃಢವಾಗಿ ನೆನಪಿಡಿರಿ ಒಬ್ಬನು ತನ್ನನ್ನು ಚಿಕ್ಕವನನ್ನಾಗಿ ಮಾಡಿಕೊಳ್ಳುವ ತನಕ ಅವನು ದೊಡ್ಡವನಾಗಲಾರನು.''

ಒಮ್ಮೆ ಬೈಅತ್ ಮಾಡಲು ಮೂರು ವ್ಯಕ್ತಿಗಳು ಬಂದಿದ್ದರು. ಬೈಅತಿನ ನಂತರ ಉಪದೇಶ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ''ಬೈಅತ್ ಮಾಡಿ ಈ ಜಮಾಅತನ್ನು ಸತ್ಯವೆಂದು ಅಂಗೀಕರಿಸಿದರೆ ಸಾಕು, ಅದರಿಂದ ಅನುಗ್ರಹ ಸಿಗುವುದು ಎಂದು ಗ್ರಹಿಸಬಾರದು. ಕೇವಲ ನಂಬುವುದರಿಂದ ಅಲ್ಲಾಹನು ಸಂತೋಷಗೊಳ್ಳುವುದಿಲ್ಲ ಅದರೊಂದಿಗೆ ಕೆಲಸಗಳು ಸಹ ಒಳ್ಳೆಯದಾಗಿರಬೇಕು. ನೀವು ಈ ಜಮಾಅತಿಗೆ ಸೇರಿದವರಾದ ಕಾರಣ ಒಳ್ಳೆಯವರಾಗಲು, ಮುತ್ತಖಿಗಳಾಗಲು ಪ್ರಯತ್ನಿಸಿರಿ. ಪ್ರತಿಯೊಂದು ಕೆಡುಕಿನಿಂದ ದೂರ ಸರಿಯಿರಿ. ನೀವು ಈ ಸಮಯ ದುಆ ಮಾಡುತ್ತಾ ಇರಿ. ರಾತ್ರಿ ಹಗಲು ಅಲ್ಲಾಹನೊಂದಿಗೆ ವಿನಯಾನ್ವಿತರಾಗಿ ಬೇಡಿಕೊಳ್ಳಿರಿ. ಪರೀಕ್ಷೆಯ ಕಾಲದಲ್ಲಿ ಅಲ್ಲಾಹನ ಕೋಪವು ವರ್ಧಿಸಿರುತ್ತದೆ. ಅಂತಹ ಸಂದರ್ಭಗಳಲ್ಲಿ ಗೋಳಿಟ್ಟು ಪ್ರಾರ್ಥಿಸಿರಿ ಮತ್ತು ದಾನಧರ್ಮ ಮಾಡಿರಿ. ನಾಲಗೆಯನ್ನು ಮೃದುಗೊಳಿಸಿರಿ. ಯಾವಾಗಲೂ **ಇಸ್ತಿಗ್‌ಫಾರ್** ಮಾಡುತ್ತಾ ಇರಬೇಕು. ನಮಾಝ್‌ಗಳಲ್ಲಿ ಅಲ್ಲಾಹನನ್ನು ಬೇಡಿಕೊಳ್ಳಿರಿ. ನಂಬಿ ಅನಂತರ ಅದರೊಂದಿಗೆ ಸತ್ಕರ್ಮಗಳನ್ನು ಮಾಡದೆ ಇದ್ದರೆ ಮತ್ತು ನಂಬಿಕೆಯನ್ನು ಬೆನ್ನ ಹಿಂದೆ ತಳ್ಳಿದರೆ ಯಾವ ಪ್ರಯೋಜನವೂ ಸಿಗಲಾರದು. ಇಂತಹ ಜನರು ಬೈಅತ್ ಮಾಡಿದ ನಂತರ ಪ್ರಯೋಜನ ಸಿಗಲಿಲ್ಲವೆಂದು ದೂರುವುದು ವ್ಯರ್ಥವಾಗಿದೆ. ಅಲ್ಲಾಹನು ಕೇವಲ ಮಾತಿನಿಂದ ಸಂಪ್ರೀತನಾಗುವುದಿಲ್ಲ.''

ಸತ್ಕರ್ಮಗಳ ಬಗ್ಗೆ ಗಮನ ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ''ನೀವು ಸತ್ಕರ್ಮಗಳನ್ನು ಮಾಡುವುದಿಲ್ಲವಾದರೆ ನೀವು ಕೇವಲ ನಂಬುವುದರಿಂದ ಪ್ರಯೋಜನ ಸಿಗಲಾರದು. ಒಬ್ಬ ವೈದ್ಯ ಔಷಧಿಯ ಚೀಟಿ ಬರೆದು ಕೊಟ್ಟರೆ ಅವನು ಉದ್ದೇಶಿಸುವುದು

ಆ ಚೀಟಿಯಲ್ಲಿ ಬರೆದ ಔಷಧವನ್ನು ಉಪಯೋಗಿಸಬೇಕೆಂದಾಗಿದೆ. ಒಬ್ಬ ರೋಗಿ ಔಷಧದ ಚೀಟಿಯನ್ನು ಪಡೆದುಕೊಂಡ ನಂತರ ಔಷಧವನ್ನು ಖರೀದಿಸಿ ಉಪಯೋಗಿಸದಿದ್ದರೆ ಅವನಿಗೆ ಸಿಗುವ ಪ್ರಯೋಜನವೇನು? ನೀವು ಈಗ **ತೌಬ** ಪ್ರಾರ್ಥನೆ ಮಾಡಿದಿರಿ. ನೀವು ಈ ಪ್ರಾರ್ಥನೆ ಮಾಡಿದ ನಂತರ ನಿಮ್ಮನ್ನು ನೀವು ಎಷ್ಟರ ಮಟ್ಟಿಗೆ ಶುದ್ಧೀಕರಿಸಿರುವಿರಿ ಎಂದು ಅಲ್ಲಾಹನು ನೋಡಲು ಬಯಸುತ್ತಾನೆ. ಅಲ್ಲಾಹನು ಈ ಕಾಲದಲ್ಲಿ **ತಖ್ವ**ದ ಮೂಲಕ ಜನರನ್ನು ವಿಂಗಡಿಸಲು ಬಯಸುತ್ತಾನೆ. ಬಹಳ ಜನರು ಅಲ್ಲಾಹನನ್ನು ದೂರುತ್ತಾರೆ. ಆದರೆ ತಮ್ಮನ್ನು ಸ್ವತಃ ಪರಿಶೀಲಿಸುವುದಿಲ್ಲ. ಮನುಷ್ಯನೇ ತನ್ನ ಆತ್ಮಕ್ಕೆ ದೌರ್ಜನ್ಯ ಮಾಡುತ್ತಾನೆ. ಅಲ್ಲಾಹನಾದರೋ ಕಾರುಣ್ಯ ನಿಧಿಯೂ ಆದರಣೀಯನೂ ಆಗಿದ್ದಾನೆ.''

ಇನ್ನೊಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: ''ಈ ಜಮಾಅತಿಗೆ ಸೇರಿ ನನ್ನೊಂದಿಗೆ ಸಂಬಂಧ ಸ್ಥಾಪಿಸುವವರು ಮತ್ತು ನನ್ನ ಶಿಷ್ಯರಾಗಲು ಬಯಸುವವರು ಉತ್ತಮವಾಗಿ ವರ್ತಿಸುವವರೂ **ತಖ್ವ**ದ ಉನ್ನತ ಸ್ಥಾನಗಳನ್ನು ತಲಪುವವರೂ ಆಗಬೇಕು. ಯಾವುದೇ ಹಿಂಸೆ, ಮತ್ತು ಕೆಟ್ಟ ನಡತೆ ಅವರ ಸಮೀಪ ಬರಬಾರದು. ಅವರು ಐದು ಹೊತ್ತು ನಮಾಝ್ ಮಾಡುವವರಾಗಬೇಕು. ಅವರು ಸುಳ್ಳು ಹೇಳಬಾರದು. ನಾಲಗೆಯಿಂದ ಯಾರಿಗೂ ನೋವನ್ನು ಉಂಟುಮಾಡಬಾರದು. ಅವರು ಯಾವುದೇ ಕೆಟ್ಟ ಕೆಲಸ ಮಾಡಬಾರದು. ಯಾವುದೇ ಹಿಂಸಾಚಾರ ಮತ್ತು ಕೆಡುಕಿನ ಬಗ್ಗೆ ಯೋಚನೆ ಸಹ ಹೃದಯದಲ್ಲಿ ಬರದಂತೆ ನೋಡಿಕೊಳ್ಳಬೇಕು. ಎಲ್ಲಾ ವಿಧಗಳ ಪಾಪಕೃತ್ಯಗಳಿಂದಲೂ ಅಪರಾಧಗಳಿಂದಲೂ ಕೆಟ್ಟ ಕೆಲಸಗಳಿಂದಲೂ ಕೆಟ್ಟ ಮಾತಿನಿಂದಲೂ ಉದ್ವೇಗಭರಿತರಾಗಿ ವರ್ತಿಸುವುದರಿಂದಲೂ ಅನಾವಶ್ಯಕ ಕೆಲಸಗಳಿಂದಲೂ ದೂರ ಸರಿಯಬೇಕು. ಪರಿಶುದ್ಧ ಹೃದಯರೂ ಯಾರಿಗೂ ಕೇಡುಂಟುಮಾಡದ ವಿನಯಾನ್ವಿತರಾದ ದೇವದಾಸರಾಗಬೇಕು. ಯಾವದೇ ವಿಷಕರವಾದ ಸತ್ವ ಅವರಲ್ಲಿ ಇಲ್ಲದಿರಲಿ.

ಈ ಉಪದೇಶಗಳನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಬೇಕು. ಈ ಉಪದೇಶಗಳ ಪಾಲನೆಯ ಮೂಲಕವೇ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವೃಕ್ಷದ ಹಚ್ಚ ಹಸಿರಾದ ಶಾಖೆಗಳಾಗುವೆವು. ನಮ್ಮ ಬೈಅತ್ ಪ್ರತಿಜ್ಞೆಗಳ ಉದ್ದೇಶ ಇವುಗಳ ಮೂಲಕ ಈಡೇರುವುದು. ಈ ಉಪದೇಶಗಳನ್ನು ನಾವು ಪಾಲಿಸಿದರೆ ಮಾತ್ರವೇ ನಾವು ಅಲ್ಲಾಹನ ಸಂಪ್ರೀತಿ ಗಳಿಸುವವರಾಗುವೆವು. ಈ ಸತ್ಕರ್ಮಗಳನ್ನು ಮಾಡುವ ಮೂಲಕ ನಾವು ಲೋಕವನ್ನು ನಮ್ಮ ಕಡೆಗೆ ಗಮನಿಸುವಂತೆ ಮಾಡಬಹುದು.

ಅಲ್ಲಾಹನು ನಮ್ಮನ್ನು ಸತ್ಯವಿಶ್ವಾಸ ಮತ್ತು ಸತ್ಕರ್ಮಗಳ ಮೂಲಕ ಯಥಾರ್ಥ ಸತ್ಯವಿಶ್ವಾಸಿಗಳೆಂದು ಪರಿಗಣಿಸಲ್ಪಡುವವರನ್ನಾಗಿ ಮಾಡಲಿ; ಮತ್ತು ಅವನ ಸಾಮಿಪ್ಯವನ್ನು ನೀಡಿ ಅನುಗ್ರಹಿಸಲಿ– ಆಮೀನ್.

--------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 19-09-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

***Email***: khutuba.kannada@gmail.com